ಈ) ಹಿಂದುಳಿದ ತಾಲ್ಲೂಕಾದ ಇಲ್ಲಿ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಯೋಜನೆ ಏನಾದರೂ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ರಸ್ತೆಗಳ ಸಂಖ್ಯೆ ೫೧, ಅವುಗಳ ಒಟ್ಟು ಉದ್ದ ೪೧೪ ಕಿ.ಮೀ., ಪೂರ್ತಿ ಉದ್ದಕ್ಕೂ ಡಾಂಬರ್ ಹಾಕಿರುವ ರಸ್ತೆಗಳ ಸಂಖ್ಯೆ ೧೦. ಹಾಗೂ ಇದರ ಉದ್ದ ೧೧೩.೨೦ ಕಿ.ಮೀ.. ಇನ್ನು ಕೆಲವು ರಸ್ತೆಗಳಿಗೆ ಭಾಗಶಃ ಡಾಂಬರ್ ಹಾಕಲಾಗಿದೆ ಮತ್ತು ಇವುಗಳ ಉದ್ದ ೩೦.೭೦ ಕಿ.ಮೀ.

ಆ) ಒಟ್ಟು ೪೧೪ ಕಿ.ಮೀ. ರಸ್ತೆಯ ಪೈಕಿ ೩೧೯ ಕಿ.ಮೀ. ಉದ್ದ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿದೆ. ಉಳಿದ ೯೫ ಕಿ.ಮೀ. ಉದ್ದದ ರಸ್ತೆಯು ಮಣ್ಣು ರಸ್ತೆಯಾಗಿದ್ದು, ಇದೂ ಸಹ ವಾಹನ ಸಂಚಾರಕ್ಕೆ ಸಾಧಾರಣವಾಗಿ ತೃಪ್ತಿಕರವಾಗಿಯೇ ಇದೆ.

ಇ) ಈ ತಾಲ್ಲೂಕಿನಲ್ಲಿ ಇನ್ನು ಡಾಂಬರು ಆಗದೆ ಉಳಿದಿರುವ ೨೭೦.೧೦ ಕಿ. ಮೀ. ಉದ್ದದ ರಸ್ತೆಯನ್ನು ಡಾಂಬರ್ ರಸ್ತೆಯನ್ನಾಗಿ ಪರಿವರ್ತಿಸಲು ಸುಮಾರು ೩೦೦ ಲಕ್ಷ ರೂಪಾಯಿಗಳು ಬೇಕಾಗಬಹುದು. ಆದ್ದರಿಂದ ಈ ಕೆಲಸವನ್ನು ಆರ್ಥಿಕ ಪರಿಸ್ಥಿತಿಗನು ಗುಣವಾಗಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಈ) ಇಲ್ಲ.

ಶ್ರೀ ಕೃಷ್ಣ.—ಈಗ ಅಧಿಕಾರಿಗಳು ೪೧೪ ಕಿ. ಮೀ. ಉದ್ದದ ರಸ್ತೆಗಳ ಪೈಕಿ ೩೧೯ ಕಿ.ಮೀ. ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿದೆ. ಉಳಿದುದು ೯೫ ಕಿ.ಮೀ. ಸಹ ಸಾಧಾರಣ ತೃಪ್ತಿಕರವಾಗಿದೆ ಎಂದು ಹೇಳಿದ್ದಾರೆ. ಸನ್ಮಾನ್ಯ ಸಚಿವರು ನಮ್ಮ ಪಕ್ಕದ ತಾಲ್ಲೂಕಿನವರೇ. ಅವರಿಗೆ ನಮ್ಮ ರಸ್ತೆಗಳ ಪರಿಸ್ಥಿತಿಯ ಬಗ್ಗೆ ಚೆನ್ನಾಗಿ ಮಾಹಿತಿ ಇದೆ. ಈ ರಸ್ತೆಗಳಿಗೆ ಡಾಂಬರು ಹಾಕುವುದಕ್ಕೆ ಮೂರು ನೂರು ಲಕ್ಷ ರೂಪಾಯಿಗಳು ಬೇಕೆಂದು ಉತ್ತರದಲ್ಲಿ ಹೇಳಿದ್ದಾರೆ. ಡಾಂಬರು ಹಾಕದಿದ್ದರೂ ಸಹ ಸಧ್ಯಕ್ಕೆ ತಂತ್ರಿ ತಿಪೇರಿ ಮಾಡಿ, ಆ ರಸ್ತೆಯನ್ನು ಸಂಚಾರಕ್ಕೆ ಯೋಗ್ಯವಾಗಿ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ —ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂತಹ ಮಾನ್ಯ ಸದಸ್ಯರಿಗೆ ತಮ್ಮ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚಾಗಿ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಬೇಕೆಂದು ತುಂಬಾ ಆಸಕ್ತಿಯನು ಹೊಂದಿದ್ದಾರೆ. ಆದರೆ ನಾವು ಸರಕಾರದ ಇತಿಮಿತಿಯನ್ನು ನೋಡಿಕೊಂಡು ಶೀರ್ಮಾನ ಹಾಗೂ ಕೆಲಸವನ್ನು ಮಾಡಬೇಕಾಗುತ್ತದೆ. ಆದುದರಿಂದ ನಾನು ಇಷ್ಟು ಮಾತ್ರ ಹೇಳಬಲ್ಲೆ, ನಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದ ಕೂಡಲೇ ಆ ಕೆಲಸಕ್ಕೆ ಹಣವನ್ನು ಕೊಡುವ ಬಗ್ಗೆ ಪ್ರಯತ್ನಮಾಡುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ಅಥಣಿ ಮತ್ತು ಕಾಗವಾಡ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಿಚಾರ ಕುರಿತು.

೩೨೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಅಥಣಿ ಮತ್ತು ಕಾಗವಾಡ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಒಟ್ಟು ಉದ್ದವೆಷ್ಟು ?

ಆ) ಈ ಪೈಕಿ ಡೀಲ್ಯಾಗಿಸಿರುವ ಎರಡೂ ಕ್ಷೇತ್ರಗಳಲ್ಲಿ ಬರುವ ರಸ್ತೆಗಳ ಎಷ್ಟು ಉದ್ದಕ್ಕೆ ಡಾಂಬರು ಹಾಕಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಆಥಣಿ ಮತ್ತು ಕಾಗವಾಡ ಕ್ಷೇತ್ರಗಳಲ್ಲಿ ಲೋಕೋಪಯೋಗಿ ಇಲಾಖೆಯ ಪಶದಲ್ಲಿರುವ ರಸ್ತೆಗಳ ಒಟ್ಟು ಉದ್ದ ಈ ಕೆಳಕಂಡಂತಿದೆ.—

ರಸ್ತೆಯ ವರ್ಗ	ಕಾಗವಾಡ ಕ್ಷೇತ್ರ	ಆಥಣಿ ಕ್ಷೇತ್ರ
	ಉದ್ದ ಕಿ.ಮೀ.	ಉದ್ದ ಕಿ.ಮೀ.
ರಾಜ್ಯ ಹೆದ್ದಾರಿ	೪೪.೨೦	೪೫.೦೦
ಜಿಲ್ಲಾ ಮುಖ್ಯ ರಸ್ತೆ	೨೬.೮೦	೩೪.೬೦
ಜಿಲ್ಲಾ ಇತರೇ ರಸ್ತೆ	೩೯.೧೦	೧೪೨.೫೦
ಗ್ರಾಮಾಂತರ ರಸ್ತೆ	೧೦೭.೫೭	೧೨೫.೪೦
ರಸ್ತೆಗಳ ಒಟ್ಟು ಉದ್ದ	೨೧೭.೬೭	೩೪೭.೫೦

ಆ) ಈ ಪೈಕಿ ಆಥಣಿ ಮತ್ತು ಕಾಗವಾಡ ಕ್ಷೇತ್ರಗಳಲ್ಲಿ ಡಾಂಬರ್ ಹಾಕಿರುವ ರಸ್ತೆಗಳ ಉದ್ದದ ವಿವರಗಳು ಈ ಕೆಳಕಂಡಂತಿದೆ. –

ರಸ್ತೆಯ ವರ್ಗ	ಕಾಗವಾಡ ಕ್ಷೇತ್ರ	ಆಥಣಿ ಕ್ಷೇತ್ರ
	ಉದ್ದ ಕಿ.ಮೀ.	ಉದ್ದ ಕಿ.ಮೀ.
ರಾಜ್ಯ ಹೆದ್ದಾರಿ	೪೪.೨೦	೪೫.೦೦
ಜಿಲ್ಲಾ ಮುಖ್ಯ ರಸ್ತೆ	೨೩.೧೦	೨೫.೦೦
ಜಿಲ್ಲಾ ಇತರೇ ರಸ್ತೆ	೮.೪೦	೨೦.೦೦
ಗ್ರಾಮಾಂತರ ರಸ್ತೆ	೨೮.೯೦	೧.೦೦
ರಸ್ತೆಗಳ ಒಟ್ಟು ಉದ್ದ	೧೦೪.೬೦	೯೧.೦೦

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತಿರುವುದು ಇಷ್ಟೆ. ಆಥಣಿ ಊರಿನೊಳಗೆ ಮುನ್ಸಿಪಲ್ ಪ್ರದೇಶದಲ್ಲಿಯೂ ಯಾವ ರಸ್ತೆಯಲ್ಲಿಯೂ ಡಾಂಬರ್ ಇಲ್ಲ. ಟೌನ್‌ನಲ್ಲಾದರೂ ಡಾಂಬರ್ ರಸ್ತೆಗಳನ್ನು ಮಾಡಿಸದಿದ್ದರೆ ತುಂಬಾ ಕಷ್ಟ ಆಗುತ್ತದೆ. ಅಲ್ಲಿ ಒಂದು ಪೆಹಿಕಲ್ ಕೂಡಾ ಸುಗುಮವಾಗಿ ಹೋಗುವುದಕ್ಕೆ ಆಗುವುದಿಲ್ಲ. ದಯಮಾಡಿ ಆ ರಸ್ತೆಗಳನ್ನು ಡಾಂಬರ್ ರಸ್ತೆಗಳನ್ನಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟದ್ದಾದರೆ ಟೌನ್ ಲಿಮಿಟ್‌ನಲ್ಲಾದರೂ, ಏನು ಹಣದ ಅಡಚಣೆ ಇದ್ದರೂ ಕೂಡಾ ಮಾಡಿಸಿಕೊಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತರ್ಜಾತಿ ವಿವಾಹಕ್ಕೆ ಧನ ಸಹಾಯ ಮಂಜೂರಾತಿ ಬಗ್ಗೆ.

೭೭೩. ಶ್ರೀ ಕೆ. ಕುಶಾಲ (ಸೊಳ್ಳ) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ೧೯೭೮ನೇ ಇಸವಿಯಿಂದ ಈವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೫ ಅಂತರ್ಜಾತಿ ವಿವಾಹಗಳು ನಡೆದಿದ್ದು ಅವರಿಗೆ ಸರಕಾರದಿಂದ ನೀಡುವ ರೂ. ೫, ೦೦೦-೦೦ವನ್ನು ಈವರೆಗೆ ಪಾವತಿ ಮಾಡದೇ ಇರಲು ಕಾರಣವೇನು ?

ಆ. ಈ ಬಗ್ಗೆ ಈಗಲಾದರೂ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ ?